## ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ಬಂಗಾರಪೇಟೆ

**ಸಿಸಿ ಸಂಖ್ಯೆ:179/2020** **ಚಾಸಾಃ 1 ಪ್ರಾಸಾಃ1**

**ಸಾಕ್ಷಿಯನ್ನು ದಿಃ21.03.2025 ರಂದು ಕರೆಸಿ ಪ್ರಮಾಣ ವಚನ ಮಾಡಿಸಲಾಯಿತು**

| | |
|---|---|
| ಹೆಸರು ಃ | ಶ್ರೀಮತಿ ಜಯಂತಿ ರಮೇಶ್ |
| ಗಂಡನ ಹೆಸರುಃ | ರಮೇಶ್ ಬಾಬು |
| ವಯಸ್ಸುಃ | 60 ವರ್ಷ |
| ವೃತ್ತಿಃ | ಗೃಹಿಣಿ |
| ವಾಸ ಸ್ಥಳಃ | ಬಂಗಾರಪೇಟೆ ತಾಲ್ಲೂಕು. |

**ಮುಖ್ಯ ವಿಚಾರಣೆ ಃ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ಅರೋಪಿಯನ್ನು ನೋಡಿದ್ದೇನೆ. ಚಾಸಾ.2 ನನ್ನ ಗಂಡ, ಚಾಸಾ.3 ಮತ್ತು ಚಾಸಾ.4 ರವರು ಪರಿಚಯ. ಚಾಸಾ.5 ಮತ್ತು ಚಾಸಾ.6 ಮಹಜರ್ ಸಾಕ್ಷಿದಾರರಾಗಿರುತ್ತಾರೆ. ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಿದ್ದು, ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಆ ದಾಖಲೆಯು ಪಿರ್ಯಾದಿಯಾಗಿದ್ದು , ಅದನ್ನು ನಿಪಿ.1 ಎಂದು, ಸಾಕ್ಷಿಯ ಸಹಿಯನ್ನು ನಿಪಿ.1(ಎ) ಎಂದು ಗುರುತಿಸಲಾಯಿತು. ಸಾಕ್ಷಿಗೆ ಇನ್ನೊಂದು ದಾಖಲೆಯನ್ನು ತೋರಿಸಿದ್ದು, ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಆ ದಾಖಲೆಯು ಸ್ಥಳಪಂಚನಾಮೆಯಾಗಿದ್ದು, ಅದನ್ನು ನಿಪಿ.2 ಎಂದು, ಸಾಕ್ಷಿಯ ಸಹಿಯನ್ನು ನಿಪಿ.2(ಎ) ಎಂದು ಗುರುತಿಸಲಾಯಿತು. ಸಾಕ್ಷಿಗೆ 4 ಛಾಯಾಚಿತ್ರಗಳು ಮತ್ತು ಒಂದು ಸಿ.ಡಿ.,ಯನ್ನು ತೋರಿಸಿದ್ದು , ಅವುಗಳು ಘಟನಾ ದಿನ ತೆಗೆದ ಛಾಯಾಚಿತ್ರಗಳು ಎಂದು ಸಾಕ್ಷಿ ನೋಡಿ ಗುರುತಿಸಿದ್ದು, ಅವುಗಳನ್ನು ನಿಪಿ.3 ರಿಂದ ನಿಪಿ.7 ಎಂದು ಗುರುತಿಸಲಾಯಿತು.

ದಿಃ 06.12.2019 ರಂದು ಸುಮಾರು 12.30 ಗಂಟೆ ಸಮಯದಲ್ಲಿ ನಾನು ಥಿಯೊಸೊಫಿಕಲ್ ಸೊಸೈಟಿಯಲ್ಲಿ ಕೆಲಸ ಮಾಡುತ್ತಿದ್ದು , ಆಗ ಚಾಸಾ.2 ರವರು ನನಗೆ ದೂರವಾಣಿ ಕರೆ ಮಾಡಿ ಅವರು ನಿವೇಶನದ ಬಳಿ ಇದ್ದಾಗ ಪಕ್ಕದ ನಿವೇಶನದಲ್ಲಿದ್ದ ಅರೋಪಿ ಆತನ ನಿವೇಶನದಲ್ಲಿದ್ದ ಕಲ್ಲು , ಮಣ್ಣು ಮತ್ತು ಇಟ್ಟಿಗೆ ಚೂರುಗಳನ್ನು ಕಬ್ಬಿಣದ ಬಾಣಲಿಯಲ್ಲಿ ತುಂಬಿಸಿಕೊಂಡು ನಮ್ಮ ನಿವೇಶನದಲ್ಲಿ ಹಾಕುತ್ತಿದ್ದ ಮತ್ತು ಆತನನ್ನು ಎಷ್ಟು ಕೇಳಿಕೊಂಡರು ನಿಲ್ಲಿಸಿಲಿಲ್ಲ. ಅದನ್ನು ತಡೆಯಲು ಹೋದ ಚಾಸಾ.2 ರವರ ಮೇಲೆಯೂ

ಕಲ್ಲು ಮತ್ತು ಮಣ್ಣು ಮತ್ತು ಇಟ್ಟಿಗೆ ಚೂರುಗಳನ್ನು ಹಾಕಿದ. ಆದ ಕಾರಣ ಚಾಸಾ.2 ರವರು ಎರಡು ಕೈಗಳನ್ನು ಅಡ್ಡ ಇಟ್ಟ ಕಾರಣ ತರಚಿದ ಗಾಯವಾಯಿತೆಂದು ನನಗೆ ಹೇಳಿದರು. ತದನಂತರ ನಾನು ಸ್ಥಳಕ್ಕೆ ಧಾವಿಸಿದಾಗ ಅರೋಪಿ ಚಾಸಾ.2 ರವರ ಮೈಮೇಲೆ ಕಲ್ಲು , ಮಣ್ಣು ಮತ್ತು ಇಟ್ಟಿಗೆ ಚೂರುಗಳನ್ನು ಹಾಕುತ್ತಲೇ ಇದ್ದ. ಚಾಸಾ.2 ರವರಿಗೆ ರಕ್ತಗಾಯಗಳು ಆಗಿದ್ದ ಕಾರಣ ಚಾಸಾ.2 ರವರನ್ನು ಆಸ್ಪತ್ರೆಗೆ ಕಳುಹಿಸಿದೆ. ನಾನು ಕೂಡ ಅರೋಪಿಯನ್ನು ನಿಲ್ಲಿಸುವಂತೆ ಕೇಳಿಕೊಂಡರು ಆತನು ನಿಲ್ಲಿಸಲಿಲ್ಲ. ಅರೋಪಿಯು ನನ್ನ ಮೇಲೆಯೂ ಕೂಡ ಕಲ್ಲು , ಮಣ್ಣು ಮತ್ತು ಇಟ್ಟಿಗೆ ಚೂರುಗಳನ್ನು ಹಾಕಿದ. ಅರೋಪಿ ನನಗೂ ಮತ್ತು ಚಾಸಾ.2 ರವರಿಗೂ ಅವ್ಯಾಚ್ಚ ಶಬ್ದಗಳಿಂದ ಬೈದ. ನಾನು ಮತ್ತು ಚಾಸಾ.2 ರವರು ಇನ್ನೂ ಇದ್ದಲ್ಲಿ ಸಾಯಿಸಿ ಊತು ಹಾಕಿಬಿಡುತ್ತೇನೆಂದು ಪ್ರಾಣ ಬೆದರಿಕೆ ಹಾಕಿದ. ಅರೋಪಿ ಮಾಡಿದ ಹಲ್ಲೆಯಿಂದ ನನಗೆ ರಕ್ತಗಾಯಗಳು ಆಯಿತು. ತದನಂತರ ನಾನು ಕೂಡ ಆಸ್ಪತ್ರೆಗೆ ಹೋದೆ. ಆಸ್ಪತ್ರೆಯಲ್ಲಿದ್ದಾಗ ಮಧ್ಯಾಹ್ನ 3.30 ಗಂಟೆಗೆ ಪೋಲೀಸರು ಬಂದು ನನ್ನ ಹೇಳಿಕೆಯನ್ನು ಪಡೆದರು. ತದನಂತರ ನನ್ನನ್ನು ಎಸ್.ಎನ್.ಆರ್ ಆಸ್ಪತ್ರೆಗೆ ಕಳುಹಿಸಿದರು.

ದಿಃ 09.12.2019 ರಂದು ಬೆಳಿಗ್ಗೆ 9.30 ಕ್ಕೆ ಪೋಲೀಸರು ಘಟನಾ ಸ್ಥಳಕ್ಕೆ ಬಂದು ಬೆಳಿಗ್ಗೆ 10.45 ಗಂಟೆಯವರೆಗೂ ಘಟನೆಯ ಬಗ್ಗೆ ಕೇಳಿ ಮಹಜರ್ ಮಾಡಿದರು. ಸ್ಥಳದಲ್ಲಿದ್ದ ಕಲ್ಲು, ಮಣ್ಣು ಮತ್ತು ಇಟ್ಟಿಗೆ ಚೂರುಗಳನ್ನು ಅಮಾನತ್ತುಪಡಿಸಿಕೊಂಡರು. ಮಹಜರ್ ಕಾಲದಲ್ಲಿ ಚಾಸಾ.5 ಮತ್ತು ಚಾಸಾ.6 ರವರು ಉಪಸ್ಥಿತರಿದ್ದರು. ನ್ಯಾಯಾಲಯದ ಮುಂದೆ ಇರುವ 9 (ಒಂಭತ್ತು) ಇಟ್ಟಿಗೆ ಚೂರುಗಳನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ಅವುಗಳನ್ನು ಮು.ಮಾ.1 ರಿಂದ ಮು.ಮಾ.9 ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ ಶ್ರೀ. ಹೆಚ್.ಸಿ.ಎಸ್., ಅರೋಪಿ ಪರ ವಕೀಲರಿಂದಃ

ನಾನು ಪದವಿಧರೇ. ನಾನು ಬೆಳಿಗ್ಗೆ 11 ಗಂಟೆಗೆ ಥಿಯೊಸೊಪಿಕಲ್ ಸೊಸೈಟಿಗೆ ಹೋದೆ. ನನ್ನ ಮನೆಯಿಂದ ಥಿಯೊಸೊಪಿಕಲ್ ಸೊಸೈಟಿಗೆ ಕಾಲು ಕಿ.ಮೀಟರ್ ಅಂತರವಿದ್ದು 5 ನಿಮಿಷದ ದಾರಿಯಾಗಿರುತ್ತದೆ. ಚಾಸಾ.2 ರವರು ನನಗೆ ಮಧ್ಯಾಹ್ನ 12.30 ಕರೆ ಮಾಡಿದರು , ನಾನು ನಿವೇಶನದ ಬಳಿ 8 ನಿಮಿಷಗಳ ಬಳಿಕ ಹೋದೆ. ಘಟನಾ ಸ್ಥಳದ ಅಕ್ಕ ಪಕ್ಕ ರಸ್ತೆ ಇದ್ದು ಜನರು ಓಡಾಡುತ್ತಾರೆ ಎಂದರೆ ಸರಿ. ನಾನು ಘಟನಾ ಸ್ಥಳಕ್ಕೆ ಹೋದಾಗ ಅರೋಪಿ, ನನ್ನ ಗಂಡ ಮತ್ತು ನನ್ನ ಗಂಡ ಕರೆದುಕೊಂಡು ಹೋಗಿದ್ದ ಕೆಲಸದವರು ಮತ್ತು ಅರೋಪಿಯ ಮನೆಯವರು ಮತ್ತು ಮನೆಯ ಒಬ್ಬ ಕೆಲಸವರು ಇದ್ದರು. ನಾನು ಬಂದು 5 ನಿಮಿಷಗಳ ನಂತರ ನನ್ನ ಗಂಡನ್ನು ಆಸ್ಪತ್ರೆಗೆ ಕಳುಹಿಸಿದೆ. ನನ್ನ ಗಂಡ ಯಾವ ರೀತಿ ಆಸ್ಪತ್ರೆಗೆ ಹೋದರು ಎಂದು ನನಗೆ ಗೊತ್ತಿಲ್ಲ. ಅರೋಪಿ ಆತನ

ನಿವೇಶನಕ್ಕೆ ಕಾಂಪೌಂಡ್ ಹಾಕಿದ್ದಾನೆ ಎಂದರೆ ಸರಿ. ಅರೋಪಿಯ ಕಾಂಪೌಂಡ್ 12 ಅಡಿ ಎತ್ತರ ಇರುತ್ತದೆ ಎಂದರೆ ಸರಿ. 12 ಅಡಿ ಎತ್ತರದ ಕಾಂಪೌಂಡ್ ಇದ್ದಾಗ ಕಲ್ಲು , ಮಣ್ಣು ಮತ್ತು ಇಟ್ಟಿಗೆ ಚೂರಗಳನ್ನು ಹಾಕುವ ಪ್ರಮೇಯ ಬರುವುದಿಲ್ಲ ಎಂದರೆ ಸಾಕ್ಷಿಯು ಅರೋಪಿಯು ಆತನ ಕಾಂಪೌಂಡ್‌ನಲ್ಲಿ ಒಂದು ಭಾಗದಲ್ಲಿ ಕಡಿಮೆ ಎತ್ತರದಲ್ಲಿ ಕಾಂಪೌಂಡ್ ನಿರ್ಮಿಸಿಕೊಂಡಿದ್ದು ಅದರ ಮುಖಾಂತರ ಕಲ್ಲು, ಮಣ್ಣು ಮತ್ತು ಇಟ್ಟಿಗೆ ಚೂರುಗಳನ್ನು ಹಾಕಿದ. ಅರೋಪಿಯ ನಿವೇಶನದ ಪಶ್ಚಿಮಕ್ಕೆ ರಸ್ತೆ ಇದೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ.

ನಿಪಿ.1 ನ್ನು ನಾನು ಹೇಳಿದಂತೆ ಪೋಲೀಸರು ಬರೆದುಕೊಂಡಿರುತ್ತಾರೆ. ನಾನು ಆಸ್ಪತ್ರೆಗೆ ಮಧ್ಯಾಹ್ನ 1.45 ಗಂಟೆಗೆ ನಡೆದುಕೊಂಡು ಹೋದೆ. ಪೋಲೀಸರು ಬಂದು ಹೋದ ಮೇಲೆ ಎಸ್ ಎನ್ ಆರ್ ಆಸ್ಪತ್ರೆಗೆ ಅಂಬ್ಯುಲೆನ್ಸ್ ಮಾಡಿ ಕಳುಹಿಸಿಕೊಟ್ಟಿರುತ್ತಾರೆ. ನಮಗೂ ಮತ್ತು ಅರೋಪಿಯ ಕುಟುಂಬಕ್ಕೂ ಜಾಗದ ವಿಷಯದಲ್ಲಿ ತಕರಾರು ಇದೆ ಎಂದರೆ ಸಾಕ್ಷಿಯು ಅರೋಪಿಯು ನಮ್ಮ ಜಾಗವನ್ನು ಒತ್ತುವರಿ ಮಾಡಿದ್ದಾನೆಂದು ನುಡಿಯುತ್ತಾರೆ. ನಾನು ಅರೋಪಿಯ ವಿರುದ್ಧ ಯಾವುದೇ ಸಿವಿಲ್ ವ್ಯಾಜ್ಯವನ್ನು ದಾಖಲಿಸಿಲ್ಲ.

ಪೋಲೀಸರು ಮಹಜರ್ ಕಾಲಕ್ಕೆ ಬಂದಾಗ ಎಷ್ಟು ಜನ ಬಂದಿದ್ದರೂ ನನಗೆ ನೆನಪಿಲ್ಲ ಆದರೆ ಚಾಸಾ.5 ಮತ್ತು ಚಾಸಾ.6 ರವರು ಮಹಜರ್ ಕಾಲದಲ್ಲಿ ಹಾಜರಿದ್ದರು. ಮಹಜರ್ ನ್ನು ಪೋಲೀಸರು ಬರೆದಿರುತ್ತಾರೆ. ಆಗ ಪೋಲೀಸರು ಮತ್ತು ಪಂಚರನ್ನು ಹೊರತುಪಡಿಸಿ ಬೇರೆ ಯಾರೂ ಇರಲಿಲ್ಲ. ಮು.ಮಾ.1 ರಿಂದ 9 ಸಾಮಾನ್ಯವಾಗಿ ಎಲ್ಲಾ ಕಡೆ ಸಿಗುತ್ತದೆ ಎಂದರೆ ಸರಿ. ನಾವೇ ಅರೋಪಿಯ ಜಾಗವನ್ನು ಒತ್ತುವರಿ ಮಾಡಿ ತಪ್ಪಿಸಿಕೊಳ್ಳುವ ಉದ್ದೇಶದಿಂದ ಸುಳ್ಳು ದೂರನ್ನು ನೀಡಿದ್ದೇವೆ ಎಂದರೆ ಸರಿಯಲ್ಲ. ಪೋಲೀಸರು ಮಹಜರ್ ಮಾಡಿಲ್ಲ ಎಂದರೆ ಸರಿಯಲ್ಲ. ನಿಪಿ.3 ರಿಂದ ನಿಪಿ.7 ನ್ನು ನಾವುಗಳು ಸೃಷ್ಟಿ ಮಾಡಿದ್ದೇವೆ ಎಂದರೆ ಸರಿಯಲ್ಲ. ನಿಪಿ.3 ರಿಂದ ನಿಪಿ.7 ನ್ನು ನನ್ನ ಗಂಡ ತೆಗೆದಿರುತ್ತಾರೆ. ಸಾಕ್ಷಿಯು ನಿಪಿ.3 ರಿಂದ ನಿಪಿ.7 ರ ಛಾಯಾಚಿತ್ರಗಳು ಘಟನೆಯಾದ ದಿನದ ಛಾಯಾಚಿತ್ರಗಳು ಅಲ್ಲ ಹೊರತಾಗಿ ಘಟನೆಯಾದ ಮರುದಿನ ನಾನು ಮಹಜರ್ ಗಾಗಿ ಕಾಯುತ್ತಿದ್ದಾಗ ಅರೋಪಿ ಮತ್ತು ಆತನ ಮನೆಯವರು ನನ್ನ ಮೇಲೆ ಮಾಡಿದ ಹಲ್ಲೆಯ

ಛಾಯಾಚಿತ್ರವಾಗಿದೆಂದು ನುಡಿಯುತ್ತಾರೆ. ಸಾಕ್ಷಿ ಮುಂದುವರೆದು ಅದಕ್ಕೆ ಸಂಬಂಧಪಟ್ಟಂತೆ ದೂರು ನೀಡಿದಾಗ ಅದು ಬಿ ರಿಪೋರ್ಟ್ ನಲ್ಲಿ ಅಂತ್ಯವಾಗಿದೆ. ಮರುದಿನ ಮಾಡಿದ ಹಲ್ಲೆಯ ಮೇರೆಗೆ ಮತ್ತೊಮ್ಮೆ ನಾನು ಆಸ್ಪತ್ರೆಗೆ ದಾಖಲು ಆಗಿದ್ದೆ. ಆಗ ಪೋಲೀಸರು ಬಂದು ಗಾಯವನ್ನು ಪರಿಶೀಲನೆ ಮಾಡಿದರು.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

ಪ್ರಭಾರ ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ,
ಬಂಗಾರಪೇಟೆ.